**ದಿ: 03.01.2024ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 37ನೇ ಸಭೆಯ ನಡಾವಳಿ**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ 37ನೇ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ದಿನಾಂಕ: 03–01–2024** ಬುಧವಾರ ಮಧ್ಯಾಹ್ನ 03.00 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಕರೆಯಲಾಗಿತ್ತು.

ಸಭೆಯಲ್ಲಿ ಹಾಜರಿದ್ದವರು:

1.ಡಾ. ಅಹಲ್ಯಾ ಎಸ್., ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಅಧ್ಯಕ್ಷರು

2.ಶ್ರೀ ಏಕೇಶ ಬಾಬು, ಉಪಕಾರ್ಯದರ್ಶಿಗಳು, ಉನ್ನತಶಿಕ್ಷಣ ಇಲಾಖೆ – ಸದಸ್ಯರು

3.ಶ್ರೀ ಕರಿಯಪ್ಪ ಎನ್, ಉಪ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ – ಸದಸ್ಯರು

4.ಪ್ರೊ. ವಿ ಗಿರೀಶ್ ಚಂದ್ರ, ಡೀನ್, ಭಾಷಾ ನಿಕಾಯ, ಕ.ಸಂ.ವಿ. – ಸದಸ್ಯರು

5.ಡಾ. ಶಿವಾನಿ.ವಿ., ಡೀನ್, ಶಾಸ್ತ್ರ ನಿಕಾಯ, –ಸದಸ್ಯರು

6.ಡಾ. ಎಸ್. ದಯಾಶಂಕರ್, ಪ್ರಾಚಾರ್ಯರು, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018 – ಸದಸ್ಯರು

7.ವಿದ್ವಾನ್ ಶ್ರೀಕಾಂತ ಪುರೋಹಿತ, ಪ್ರಾಚಾರ್ಯರು, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ –571811 – ಸದಸ್ಯರು

8.ಶ್ರೀ ನಾಗಪತಿ ಕೇಶವ ಭಟ್ಟ, ಪ್ರಾಚಾರ್ಯರು, ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ, ಸುರಕಟ್ಟೆ, ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ –581334 – ಸದಸ್ಯರು

9.ಶ್ರೀ ಆರ್.ಪಿ. ಜೋಶಿ, ಪ್ರಾಚಾರ್ಯರು, ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ ಬಾಗಲಕೋಟೆ ಜಿಲ್ಲೆ –587301 – ಸದಸ್ಯರು

10.ಶ್ರೀಮತಿ ಗೀತಾ ವೀರಯ್ಯ ಹಿರೇಮಠ, ಪ್ರಾಂಶುಪಾಲರು, ಶ್ರೀ ಚನ್ನಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಕಾಲೇಜು, ಹಿರೇಕಲ್ಮಠ, ಹೊನ್ನಾಳಿ, ದಾವಣಗೆರೆ ಜಿಲ್ಲೆ – 577212 – ಸದಸ್ಯರು

11.ಡಾ. ರೂಪಶ್ರೀ ಎಸ್. ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು –ಸದಸ್ಯ ಕಾರ್ಯದರ್ಶಿಗಳು

**ಗೈರು ಹಾಜರಾದವರು:**

1. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ವಿಧಾನ ಸೌಧ, ಬೆಂಗಳೂರು.
2. ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು.
3. ಮಹಾ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ ಮೈಸೂರು.
4. ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ, ಡೀನ್, ವೇದಾಂತ ನಿಕಾಯ
5. ಪ್ರೊ.ಸಿ.ಪಾಲಯ್ಯ, ಡೀನ್, ಪ್ರಾಚೀನ ಭಾರತೀಯ ವಿಜ್ಞಾನ ನಿಕಾಯ

ಸಭೆಯ ಆರಂಭದಲ್ಲಿ ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ನಂತರ ಕಾರ್ಯಸೂಚಿಯಂತೆ ವಿಷಯವಾರು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

| ಕ್ರ.ಸಂ. | ವಿಷಯ ಮತ್ತು ಟಿಪ್ಪಣಿ |
|---|---|
| **01.** | **ಪ್ರಶಿಕ್ಷಣ ಪರಿಷತ್ತಿನ 36ನೇ ಸಭೆಯ ನಿರ್ಣಯದ ಅನುಪಾಲನಾ ವರದಿ.**<br>ದಿ: 27.09.2023ರಂದು **ಪ್ರಶಿಕ್ಷಣ ಪರಿಷತ್ತಿನ 36ನೇ ಸಭೆಯು** ನಡೆದಿತ್ತು. ಸಭೆಯ ನಿರ್ಣಯದ ಅನುಪಾಲನಾ ವರದಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ.<br>**(ಅನುಬಂಧ – 01)** |
| ನಿರ್ಣಯ | **ಪ್ರಶಿಕ್ಷಣ ಪರಿಷತ್ತಿನ 36ನೇ ಸಭೆಯ ನಿರ್ಣಯದ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.** |
| **02.** | **ಸರ್ಟಿಫಿಕೇಟ್/ಡಿಪ್ಲೊಮಾ ಕೋರ್ಸಗಳನ್ನು ಆರಂಭಿಸುವ ಬಗ್ಗೆ.**<br>ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಹಲವು ವಿಭಾಗಗಳಡಿಯಲ್ಲಿ ವಿವಿಧ ಸರ್ಟಿಫಿಕೇಟ್/ಡಿಪ್ಲೋಮಾ ಕೋರ್ಸಗಳನ್ನು ನಡೆಸಲಾಗುತ್ತಿದೆ. ಪ್ರಸ್ತುತ ಈ ಕೆಳಗಿನ ವಿಷಯಗಳಲ್ಲಿ ಸರ್ಟಿಫಿಕೇಟ್ ಕೋರ್ಸಗಳನ್ನು ಆರಂಭಿಸಲು ಸಂಸ್ಕೃತಾಸಕ್ತರ ಬೇಡಿಕೆಯ ಮೇರೆಗೆ ಆಯಾ ವಿಭಾಗಗಳು ಕೋರ್ಸಿನ ಸ್ವರೂಪ, ಪಾಠ್ಯಕ್ರಮಗಳನ್ನು ಸಿದ್ಧಪಡಿಸಿ ಅಧ್ಯಯನ ಮಂಡಳಿಯಲ್ಲಿ ಇದಕ್ಕೆ ಅನುಮೋದನೆ ಪಡೆದು ಸದರಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿಯನ್ನು ಕೋರಿ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಟಿಫಿಕೇಟ್/ಡಿಪ್ಲೋಮಾ ಕೋರ್ಸಗಳ ಪಟ್ಟಿ ಈ ಕೆಳಗಿನಂತಿದೆ. |

List of Certificate Courses

| S.N | Department | | Name of the Course |
|---|---|---|---|
| 1 | Vedanta | 1 | Certificate Course in Shaktivishishtadvaita |
| | | 2 | Certificate Course in Meemamsa Shastra |
| 2 | Ayurveda and Folk Medicine | 3 | Certificate Course in Ayur Samskrit |
| 3 | Manuscriptology | 4 | Certificate Course in Bhavaramayana |
| | | 5 | Certificate Course in Ramayana Darshana |
| 4 | Faculty of Ancient Indian Science | 6 | Certificate Course in Nirvahana Vijnanam |

List of Diploma/PG Diploma

| S.N | Department | | Name of the Course |
|---|---|---|---|
| 1 | Ayurveda and Folk Medicine | 1 | Basics of Vedic Astrology for Beginners – Ayurjyotisha |
| | | 2 | Vedic Dinacharya for present day healthy living |
| | | 3 | Ayurvedic Manuscriptology |
| | | 4 | Yoga and psychotherapy |
| | | 5 | Introduction to AyurYoga |
| | | 6 | Ayurvediya Paaka Shastra |
| | | 7 | Introduction to GarbhaSamskara |

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆಯಾ ವಿಭಾಗದಡಿಯಲ್ಲಿ ವಿಶ್ವವಿದ್ಯಾಲಯ ಮತ್ತು ಮಾನ್ಯತೆ ಪಡೆದ ಸಂಶೋಧನ ಕೇಂದ್ರಗಳಲ್ಲಿ ಸರ್ಟಿಫಿಕೇಟ್ ಕೋರ್ಸಗಳನ್ನು ಸಮಯಾನುಸಾರ ಆರಂಭಿಸಲು ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| | |
|---|---|
| ನಿರ್ಣಯ | **ಸರ್ಟಿಫಿಕೇಟ್, ಡಿಪ್ಲೋಮಾ ಮತ್ತು ಪಿ. ಜಿ. ಡಿಪ್ಲೋಮಾ ಕೋರ್ಸಗಳನ್ನು ವಿಶ್ವವಿದ್ಯಾಲಯದ ವಿವಿಧ ವಿಭಾಗಳಲ್ಲಿ ಮತ್ತು ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಆರಂಭಿಸಲು ಪ್ರಶಿಕ್ಷಣ ಪರಿಷತ್ತಿನ ಸಭೆಯು ಅನುಮೋದಿಸಿತು.** |
| 03. | **Department of Ayurveda and Folk Medicine – ಆಯುರ್ವೇದ ಮತ್ತು ಜಾನಪದ ಔಷಧ ವಿಭಾಗವನ್ನು ಸ್ಥಾಪಿಸುವ ಬಗ್ಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ – 2009ರ VIIನೇ ಅಧ್ಯಾಯದ 49ನೇ ಉಪಬಂಧದ VIರಲ್ಲಿ Faculty of Ancient Indian Science ಸಂಕಾಯದಡಿಯಲ್ಲಿ **ಆಯುರ್ವೇದ ಮತ್ತು ಜಾನಪದ ಔಷಧ (Department of Ayurveda and Folk Medicine)** ವಿಭಾಗವನ್ನು ಸ್ಥಾಪಿಸಲು ಅವಕಾಶವಿರುತ್ತದೆ. ಪ್ರಸ್ತುತ ವಿದ್ಯಾರ್ಥಿಗಳ ಮತ್ತು ಸಂಸ್ಕೃತಾಸಕ್ತರ ಬೇಡಿಕೆ ಮತ್ತು ಹಿತದೃಷ್ಟಿಯಿಂದ Faculty of Ancient Indian Science ಸಂಕಾಯದಡಿಯಲ್ಲಿ **ಆಯುರ್ವೇದ ಮತ್ತು ಜಾನಪದ ಔಷಧ (Department of Ayurveda and Folk Medicine)** ವಿಭಾಗವನ್ನು ಸ್ಥಾಪಿಸಲು ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **Department of Ayurveda and Folk Medicine – ಆಯುರ್ವೇದ ಮತ್ತು ಜಾನಪದ ಔಷಧ ವಿಭಾಗವನ್ನು ಸ್ಥಾಪಿಸಲು ಸಭೆಯು ಅನುಮೋದಿಸಿತು.** |
| 04. | **AAPYAMINSTITUTE OF INDIGENOUS SCIENCES AND RESEARCH "Brindavna", #136, 4thCross, Gauvravanagar, JP nagar 7th phase, bangaluru-560078 – ಈ ಸಂಶೋಧನಾ ಕೇಂದ್ರಕ್ಕೆ ಅನುಮತಿ ಹಾಗೂ ಮಾನ್ಯತೆ ನೀಡುವ ಕುರಿತು.**<br><br>AAPYAMINSTITUTE OF INDIGENOUS SCIENCES AND RESEARCH "Brindavna", #136, 4thCross, Gauvravanagar, JP nagar 7th phase, bangaluru-560078 – ಈ ಸಂಸ್ಥೆಯು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆಯನ್ನು ಕೋರಿದ್ದು, 28.06.2023 ರಂದು ನಿಯಮಾನುಸಾರ ಸಂಶೋಧನಕೇಂದ್ರ ಪರಿಶೀಲನ ಸಮಿತಿಯು ದಾಖಲಾತಿಯನ್ನು ಪರಿಶೀಲಿಸಿ ವರದಿಯನ್ನು ನೀಡಿದೆ. ಈ **ಸಂಸ್ಥೆಯು** ಸಂಶೋಧನೆ ಮತ್ತು ಗ್ರಂಥಪ್ರಕಾಶನ ಕಾರ್ಯವನ್ನು ನಿರ್ವಹಿಸುತ್ತಾ ಬಂದಿದೆ. ಈ ಕೇಂದ್ರವು ಸಂಶೋಧನೆಗೆ ಪೂರಕವಾದ ಪೀಠೋಪಕರಣಗಳು, ಸಂಗಣಕ ವಿಭಾಗ, ಸುಸಜ್ಜಿತ ಗ್ರಂಥಾಲಯ, ಪರಾಮರ್ಶನ ಗ್ರಂಥಗಳು, ನಿಯತಕಾಲಿಕೆಗಳು, ವಿದ್ವತ್‌ಪತ್ರಿಕೆಗಳು ಹಾಗೂ ಮತ್ತಿತರ ಆಧುನಿಕ ಸೌಲಭ್ಯಗಳನ್ನು ಹೊಂದಿದ್ದು ಸಂಶೋಧನೆಗೆ ಪೂರಕವಾಗಿದೆ. ಈ ಹಿನ್ನೆಲೆಯಲ್ಲಿ **ಪ್ರಶಿಕ್ಷಣ ಪರಿಷತ್ತಿನ** ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಈ ಸಂಸ್ಥೆಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು **ಸಂಶೋಧನಾ ಕೇಂದ್ರವೆಂದು** ಪರಿಗಣಿಸಿ, **2023–24ನೇ ಸಾಲಿನಿಂದ 2025–26ನೇ** ಸಾಲಿನ ವರೆಗೆ **ಮೂರು** ವರ್ಷಗಳ ಕಾಲ ಮಾನ್ಯತೆಯನ್ನು ನೀಡಲಾಗಿದ್ದು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **AAPYAMINSTITUTE OF INDIGENOUS SCIENCES AND RESEARCH "Brindavna", #136, 4thCross, Gauvravanagar, JP nagar 7th phase, bangaluru-560078 – ಈ ಸಂಶೋಧನಾ ಕೇಂದ್ರಕ್ಕೆ ಅನುಮತಿ ಹಾಗೂ ಮಾನ್ಯತೆ ನೀಡಲು ಸಭೆಯು ಅನುಮೋದಿಸಿತು.** |
| 05. | **ವಿಷ್ಣುಗುಪ್ತ ವಿಶ್ವವಿದ್ಯಾಪೀಠಮ್, ಅಶೋಕೆ, ಗೋಕರ್ಣ, ಉತ್ತರಕನ್ನಡ ಜಿಲ್ಲೆ – ಈ ಸಂಶೋಧನಾ ಕೇಂದ್ರಕ್ಕೆ ಅನುಮತಿ ಹಾಗೂ ಮಾನ್ಯತೆ ನೀಡುವ ಕುರಿತು.**<br><br>**ವಿಷ್ಣುಗುಪ್ತ ವಿಶ್ವವಿದ್ಯಾಪೀಠಮ್, ಅಶೋಕೆ, ಗೋಕರ್ಣ, ಉತ್ತರಕನ್ನಡ ಜಿಲ್ಲೆ,** – ಈ ಸಂಸ್ಥೆಯು |

| | |
|---|---|
| | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆಯನ್ನು ಕೋರಿದ್ದು, 12.10.2023 ರಂದು ನಿಯಮಾನುಸಾರ ಸಂಶೋಧನಕೇಂದ್ರ ಪರಿಶೀಲನ ಸಮಿತಿಯು ದಾಖಲಾತಿಯನ್ನು ಪರಿಶೀಲಿಸಿ ವರದಿಯನ್ನು ನೀಡಿದೆ ಈ **ಸಂಸ್ಥೆಯು** ಸಂಶೋಧನೆ ಮತ್ತು ಗ್ರಂಥಪ್ರಕಾಶನ ಕಾರ್ಯವನ್ನು ನಿರ್ವಹಿಸುತ್ತಾ ಬಂದಿದೆ. ಈ ಕೇಂದ್ರವು ಸಂಶೋಧನೆಗೆ ಪೂರಕವಾದ ಪೀಠೋಪಕರಣಗಳು, ಸಂಗಣಕ ವಿಭಾಗ, ಸುಸಜ್ಜಿತ ಗ್ರಂಥಾಲಯ, ಪರಾಮರ್ಶನ ಗ್ರಂಥಗಳು, ನಿಯತಕಾಲಿಕೆಗಳು, ವಿದ್ವತ್‌ಪತ್ರಿಕೆಗಳು ಹಾಗೂ ಮತ್ತಿತರ ಆಧುನಿಕ ಸೌಲಭ್ಯಗಳನ್ನು ಹೊಂದಿದ್ದು ಸಂಶೋಧನೆಗೆ ಪೂರಕವಾಗಿದೆ. ಈ ಹಿನ್ನೆಲೆಯಲ್ಲಿ **ಪ್ರಶಿಕ್ಷಣ ಪರಿಷತ್ತಿನ** ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಈ ಸಂಸ್ಥೆಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು **ಸಂಶೋಧನಾ ಕೇಂದ್ರವೆಂದು** ಪರಿಗಣಿಸಿ, **2023-24ನೇ ಸಾಲಿನಿಂದ 2025-26ನೇ** ಸಾಲಿನ ವರೆಗೆ **ಮೂರು** ವರ್ಷಗಳ ಕಾಲ ಮಾನ್ಯತೆಯನ್ನು ನೀಡಲಾಗಿದ್ದು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ವಿಷ್ಣುಗುಪ್ತ ವಿಶ್ವವಿದ್ಯಾಪೀಠಮ್, ಅಶೋಕೆ, ಗೋಕರ್ಣ, ಉತ್ತರಕನ್ನಡ ಜಿಲ್ಲೆ – ಈ ಸಂಶೋಧನಾ ಕೇಂದ್ರಕ್ಕೆ ಅನುಮತಿ ಹಾಗೂ ಮಾನ್ಯತೆ ನೀಡಲು ಸಭೆಯು ಅನುಮೋದಿಸಿತು.** |
| **06.** | **ಶ್ರೀವಾಣಿ ಜ್ಯೋತಿಷ್ಯ ಕಾಲೇಜ್ ಆಫ್ ಆಸ್ಟ್ರಾಲಜಿ ಅಂಡ್ ರಿಸರ್ಚ ಸೆಂಟರ್ ಸಾತನೂರು – ಸಾತನೂರು ಅಂಚೆ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ, – 562120 – ಈ ಜ್ಯೋತಿಷ್ಯ ಅಧ್ಯಯನ ಕೇಂದ್ರಕ್ಕೆ ಅನುಮತಿ ಹಾಗೂ ಮಾನ್ಯತೆ ನೀಡುವ ಕುರಿತು.**<br><br>ಶ್ರೀವಾಣಿ ಜ್ಯೋತಿಷ್ಯ ಕಾಲೇಜ್ ಆಫ್ ಆಸ್ಟ್ರಾಲಜಿ ಅಂಡ್ ರಿಸರ್ಚ ಸೆಂಟರ್ ಸಾತನೂರು, – ಸಾತನೂರು ಅಂಚೆ,ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ, – 562120– ಈ ಸಂಸ್ಥೆಯು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆಯನ್ನು ಕೋರಿದ್ದು, 12.10.2023 ರಂದು ನಿಯಮಾನುಸಾರ **ಜ್ಯೋತಿಷ್ಯ ಅಧ್ಯಯನ ಕೇಂದ್ರಕ್ಕೆ** ಪರಿಶೀಲನ ಸಮಿತಿಯು ದಾಖಲಾತಿಯನ್ನು ಪರಿಶೀಲಿಸಿ ವರದಿಯನ್ನು ನೀಡಿದೆ ಈ **ಸಂಸ್ಥೆಯು** ಸಂಶೋಧನೆ ಮತ್ತು ಗ್ರಂಥಪ್ರಕಾಶನ ಕಾರ್ಯವನ್ನು ನಿರ್ವಹಿಸುತ್ತಾ ಬಂದಿದೆ. ಈ ಕೇಂದ್ರವು ಅಧ್ಯಯನಕ್ಕೆ ಪೂರಕವಾದ ಗ್ರಂಥಗಳು, ಹಾಗೂ ಮತ್ತಿತರ ಆಧುನಿಕ ಸೌಲಭ್ಯಗಳನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ **ಪ್ರಶಿಕ್ಷಣ ಪರಿಷತ್ತಿನ** ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಈ ಸಂಸ್ಥೆಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು **ಜ್ಯೋತಿಷ್ಯ ಅಧ್ಯಯನ** ಕೇಂದ್ರವೆಂದು ಪರಿಗಣಿಸಿ, **2023-24ನೇ ಸಾಲಿನಿಂದ 2025-26ನೇ** ಸಾಲಿನ ವರೆಗೆ **ಮೂರು** ವರ್ಷಗಳ ಕಾಲ ಮಾನ್ಯತೆಯನ್ನು ನೀಡಲಾಗಿದ್ದು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಶ್ರೀವಾಣಿ ಜ್ಯೋತಿಷ್ಯ ಕಾಲೇಜ್ ಆಫ್ ಆಸ್ಟ್ರಾಲಜಿ ಅಂಡ್ ರಿಸರ್ಚ ಸೆಂಟರ್ ಸಾತನೂರು – ಸಾತನೂರು ಅಂಚೆ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ, – 562120 – ಈ ಜ್ಯೋತಿಷ್ಯ ಅಧ್ಯಯನ ಕೇಂದ್ರಕ್ಕೆ ಅನುಮತಿ ಹಾಗೂ ಮಾನ್ಯತೆ ನೀಡಲು ಸಭೆಯು ಅನುಮೋದಿಸಿತು.** |
| **07.** | **ಶ್ರೀ ಗಾಣಿಗ ಎಜುಕೇಷನಲ್ ಅಂಡ್ ಚಾರಿಟೇಬಲ್ ಟ್ರಸ್ಟ್ (ರಿ). ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುವ ಜ್ಞಾನ ಜ್ಯೋತಿ ಯೋಗ ಅಧ್ಯಯನ ಕೇಂದ್ರ, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು-560096 ಸಂಸ್ಥೆಗೆ ಅಧ್ಯಯನ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ.**<br>ಶ್ರೀ ಗಾಣಿಗ ಎಜುಕೇಷನಲ್ ಅಂಡ್ ಚಾರಿಟೇಬಲ್ ಟ್ರಸ್ಟ್(ರಿ), ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುವ ಜ್ಞಾನ ಜ್ಯೋತಿ ಯೋಗ ಅಧ್ಯಯನ ಕೇಂದ್ರ, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು-560096 – ಈ ಸಂಸ್ಥೆಯು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಅಧ್ಯಯನ ಕೇಂದ್ರ ಮಾನ್ಯತೆ ಪಡೆಯಲು ಪ್ರಸ್ತಾವನೆ ಸಲ್ಲಿಸಿದ್ದು, ಪರಿಶೀಲನಾ ಸಮಿತಿಯು ಸಂಸ್ಥೆಗೆ ಭೇಟಿ ನೀಡಿ ತಪಾಸಣೆ ನಡೆಸಿ ವರದಿಯನ್ನು ಸಲ್ಲಿಸಿ ಈ ಸಂಸ್ಥೆಗೆ ಮಾನ್ಯತೆ ನೀಡುವಂತೆ ಶಿಫಾರಸ್ಸು ಮಾಡಿರುತ್ತದೆ. ಇದರ ಆಧಾರದ ಮೇಲೆ ಹಾಗೂ ಜ್ಞಾನ ಜ್ಯೋತಿ ಯೋಗ ಅಧ್ಯಯನ ಕೇಂದ್ರವು ಯೋಗ ತರಬೇತಿ ನೀಡುವ ಸಂಬಂಧ ಅವಶ್ಯವಿರುವ ಎಲ್ಲ ಮೂಲಭೂತ ಸೌಕರ್ಯಗಳಾದ |

| | |
|---|---|
| | ಪಾಠೋಪಕರಣಗಳು, ಯೋಗಾಭ್ಯಾಸ ಮತ್ತು ಚಿಕಿತ್ಸೆಗಳಿಗೆ ಬೇಕಾದ ಸಲಕರಣೆಗಳು, ಸಂಗಣಕ ವಿಭಾಗ, ಸುಸಜ್ಜಿತ ಗ್ರಂಥಾಲಯ, ಪರಾಮರ್ಶನ ಗ್ರಂಥಗಳು, ಹಾಗೂ ಮತ್ತಿತರ ಆಧುನಿಕ ಸೌಲಭ್ಯಗಳನ್ನು ಹೊಂದಿರುವುದನ್ನು ಗಮನಿಸಿ ಈ ಸಂಸ್ಥೆಗೆ ಅಧ್ಯಯನ ಕೇಂದ್ರದ ಮಾನ್ಯತೆಯನ್ನು ನೀಡಿ ಈ ಸಂಸ್ಥೆಗೆ ಸರ್ಟಿಫಿಕೇಟ್, ಡಿಪ್ಲೋಮಾ, ಪಿ.ಜಿ, ಡಿಪ್ಲೋಮಾ ತರಗತಿಯನ್ನು ಪ್ರಾರಂಭಿಸಲು 2023-24ನೇ ಸಾಲಿನಿಂದ 2025-26ನೇ ಸಾಲಿನ ವರೆಗೆ ಮೂರು ವರ್ಷಗಳ ಕಾಲ ಮಾನ್ಯತೆಯನ್ನು ನೀಡಲಾಗಿದ್ದು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಶ್ರೀ ಗಾಣಿಗ ಎಜುಕೇಷನಲ್ ಅಂಡ್ ಚಾರಿಟೇಬಲ್ ಟ್ರಸ್ಟ್ (ರಿ). ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುವ ಜ್ಞಾನ ಜ್ಯೋತಿ ಯೋಗ ಅಧ್ಯಯನ ಕೇಂದ್ರ, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು-560096 ಸಂಸ್ಥೆಗೆ ಅಧ್ಯಯನ ಕೇಂದ್ರದ ಮಾನ್ಯತೆ ನೀಡಲು ಸಭೆಯು ಅನುಮೋದಿಸಿತು.** |
| **08.** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರಿಸರ ಹಾಗೂ ಮಾನಿತ ವಿವಿಧ ಸಂಶೋಧನಾ ಕೇಂದ್ರಗಳಲ್ಲಿ ವಿವಿಧ ಡಿಪ್ಲೊಮಾ /ಪಿ ಜಿ ಡಿಪ್ಲೊಮಾ/ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲು ಶುಲ್ಕ ನಿಗದಿಪಡಿಸಿರುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009' ರಂತೆ 2010ರಲ್ಲಿ ಪ್ರಾರಂಭಗೊಂಡಿದ್ದು, ಸಂಸ್ಕೃತ ಭಾಷೆಯ ಭಾಷಾ ಮತ್ತು ಶಾಸ್ತ್ರೀಯ ರೂಪಗಳಲ್ಲಿ ಕರ್ನಾಟಕದಾದ್ಯಂತ ಅಧ್ಯಯನ ಮತ್ತು ಅಧ್ಯಾಪನಕ್ಕೆ ಅವಕಾಶ ಕಲ್ಪಿಸಲಾಗಿದೆ. ವಿಶ್ವವಿದ್ಯಾಲಯವು ತನ್ನ ಪರಿಸರ ಮತ್ತು ಅಧೀನ ಕಾಲೇಜುಗಳಲ್ಲಿ ಬಿ ಎ (ಶಾಸ್ತ್ರೀ) ಮತ್ತು ಎಂ ಎ (ಆಚಾರ್ಯ) ಪದವಿಗಳನ್ನು ನಡೆಸುವುದರ ಜೊತೆಗೆ ಪರಿಸರ ಹಾಗೂ ವಿವಿಧ ಸಂಶೋಧನಾ ಕೇಂದ್ರಗಳಲ್ಲಿ ಡಿಪ್ಲೊಮಾ/ಪಿ ಜಿ ಡಿಪ್ಲೊಮಾ/ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಸಹ ನಡೆಸುತ್ತಾ ಬಂದಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009 ರ ಪ್ರಕರಣ 4 ಮತ್ತು 49 ರಲ್ಲಿ ಸಂಸ್ಕೃತದ ವಿವಿಧ ವಿಭಾಗಗಳಲ್ಲಿ ಕೋರ್ಸ್‌ಗಳನ್ನು ಪ್ರಾರಂಭಿಸಿ ನಡೆಸಲು ಅವಕಾಶವಿದೆ ಹಾಗೂ ದಿನಾಂಕ:27.09.2023ರಂದು ನಡೆದ ಪ್ರಶಿಕ್ಷಣ ಸಮಿತಿಯ 36ನೇ ಸಭೆಯ ಅನುಮೋದನೆ ಮತ್ತು ದಿನಾಂಕ: 30.09.2023ರಂದು ನಡೆದ ಪ್ರಶಾಸನ ಸಮಿತಿಯ 68ನೇ ಸಭೆಯ ಅನುಮೋದನೆಯಂತೆ ವಿಶ್ವವಿದ್ಯಾಲಯದ ಮಾನಿತ ಸಂಶೋಧನಾ ಕೇಂದ್ರಗಳು ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರಿಸರದಲ್ಲಿ ವಿವಿಧ ಡಿಪ್ಲೊಮಾ/ಪಿ ಜಿ ಡಿಪ್ಲೊಮಾ/ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲು ಹಾಗೂ ಶುಲ್ಕವನ್ನು ನಿಗದಿಪಡಿಸುವ ಆದೇಶವನ್ನು ದಿನಾಂಕ: 21.10.2023ರಂದು ಹೊರಡಿಸಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರಿಸರದಲ್ಲಿ ಹಾಗೂ ವಿವಿಧ ಸಂಶೋಧನಾ ಕೇಂದ್ರಗಳಲ್ಲಿ ವಿವಿಧ ಡಿಪ್ಲೊಮಾ/ಪಿ ಜಿ ಡಿಪ್ಲೊಮಾ/ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲು ಅಧಿಸೂಚಿಸಿ ಅನುಬಂಧ-02ರಂತೆ ಶುಲ್ಕವನ್ನು ನಿಗದಿಪಡಿಸಲಾಗಿದ್ದು ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. (ಅನುಬಂಧ – 02) |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರಿಸರ ಹಾಗೂ ಮಾನಿತ ವಿವಿಧ ಸಂಶೋಧನಾ ಕೇಂದ್ರಗಳಲ್ಲಿ ವಿವಿಧ ಡಿಪ್ಲೊಮಾ /ಪಿ ಜಿ ಡಿಪ್ಲೊಮಾ/ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲು ಶುಲ್ಕ ನಿಗದಿಪಡಿಸಿರುವುದನ್ನು ಸಭೆಯು ಅನುಮೋದಿಸಿತು.** |

| | |
|---|---|
| **09.** | **ರಜಾ ದಿನಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಪರಿಹಾರ ರಜೆ ನೀಡುವ ಬಗ್ಗೆ.**<br>ವಿಶ್ವವಿದ್ಯಾಲಯದ ಹಲವು ವಿಭಾಗಗಳಲ್ಲಿ ಕೆಲಸ ಕಾರ್ಯಗಳು ತುರ್ತಾಗಿ ನಿಗದಿತ ಸಮಯದಲ್ಲಿ ಪೂರ್ಣವಾಗಬೇಕಾದ ಅನಿವಾರ್ಯ ಸಂದರ್ಭದಲ್ಲಿ ಕೆಲವು ಸಿಬ್ಬಂದಿಗಳು ವಾರದ ರಜಾ ದಿನಗಳಲ್ಲಿ ಮತ್ತು ಸರ್ಕಾರಿ ರಜಾ ದಿನಗಳಲ್ಲಿಯೂ ಸಹ ಕಾರ್ಯ ನಿರ್ವಹಿಸಬೇಕಾಗುತ್ತದೆ. ಹೀಗೆ ತುರ್ತು ಸಂದರ್ಭದಲ್ಲಿ ರಜಾ ದಿನಗಳಲ್ಲಿ ಕರ್ತವ್ಯ ನಿರ್ವಹಿಸಿದ ಸಿಬ್ಬಂದಿಗಳಿಗೆ ಅದರ ಬದಲಿಗೆ ಬೇರೆ ದಿನಗಳಲ್ಲಿ ರಜೆ ಪಡೆಯಲು ಅನುಕೂಲವಾಗುವಂತೆ ಪರಿಹಾರ ರಜೆಯನ್ನು ನೀಡುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ರಜಾ ದಿನಗಳಲ್ಲಿ ಕರ್ತವ್ಯ ನಿರ್ವಹಿಸುವ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಪರಿಹಾರ ರಜೆ ನೀಡಲು ಸಭೆಯು ಅನುಮೋದಿಸಿತು.** |
| **10.** | **ಸಾಂಖ್ಯ ಮತ್ತು ಯೋಗ ವಿಭಾಗಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಿಸುವ ಬಗ್ಗೆ.**<br>ವಿಶ್ವವಿದ್ಯಾಲಯದಲ್ಲಿ ಸಾಂಖ್ಯ ಮತ್ತು ಯೋಗ ವಿಭಾಗದಲ್ಲಿ MSc–ಯೋಗಶಾಸ್ತ್ರ ಪದವಿ ತರಗತಿಗಳು ನಡೆಯುತ್ತಿದ್ದು, ಪಾಠ ಪ್ರವಚನಕ್ಕೆ ಸಂದರ್ಶನದ ಮೂಲಕ 02 ಅತಿಥಿ ಉಪನ್ಯಾಸಕರನ್ನು ಈ ವಿಭಾಗಕ್ಕೆ ನೇಮಕ ಮಾಡಲಾಗಿತ್ತು. ಅದರಲ್ಲಿ ಒಬ್ಬರು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು ಇನ್ನೊಬ್ಬರು ವಿಶ್ವವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಮಾಡುತ್ತಿರುವುದರಿಂದ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ. ಆದ್ದರಿಂದ ಇವರ ಬದಲಿಗೆ ವಿಭಾಗದ ಅವಶ್ಯಕತೆಗನುಗುಣವಾಗಿ 04 ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡಿಕೊಂಡಿದ್ದು ಸಭೆಯ ಘಟನೋತ್ತರ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಸಾಂಖ್ಯ ಮತ್ತು ಯೋಗ ವಿಭಾಗಕ್ಕೆ 04 ಸಂದರ್ಶಕ ಪ್ರಾಧ್ಯಾಪಕರನ್ನು ನೇಮಿಸಿರುವುದನ್ನು ಸಭೆಯು ಅನುಮೋದಿಸಿತು.** |
| **11.** | **ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಡಿಪ್ಲೊಮಾ ಕೋರ್ಸಗಳನ್ನು ಆರಂಭಿಸುವ ಬಗ್ಗೆ.**<br>ವ್ಯಾಕರಣ ವಿಭಾಗವು PG Diploma in Sanskrit Computational Linguistics ಕಾರ್ಯಕ್ರಮವನ್ನು ನಿಯತವಾಗಿ ನಡೆಸುತ್ತಿದೆ. ಆದರೆ ಇದರ ಪರೀಕ್ಷೆಯನ್ನು ಆನಲೈನ್ ಮೂಲಕ ನಡೆಸಲು ಸಾಧ್ಯವಾಗುತ್ತಿಲ್ಲ ಮತ್ತು ತರಗತಿಗಳನ್ನು ನಡೆಸಲು ಅಧ್ಯಾಪಕರ ಕೊರತೆಯಿರುವುದರಿಂದ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಈ ಕೋರ್ಸನ್ನು ನಡೆಸುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಡಿಪ್ಲೊಮಾ ಕೋರ್ಸಗಳನ್ನು ಆರಂಭಿಸಲು ಸಭೆಯು ಅನುಮೋದಿಸಿತು.** |
| **12.** | **IKS ಕೋರ್ಸ್‌ಗಳನ್ನು ನಡೆಸಲು ವಿವಿಧ ವಿಶ್ವವಿದ್ಯಾಲಯ/ಸಂಸ್ಥೆಗಳ ಜೊತೆ ಒಡಂಬಡಿಕೆ (MOU) ಮಾಡಿಕೊಳ್ಳುವ ಬಗ್ಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ IKS (ಭಾರತೀಯ ಜ್ಞಾನ ಪದ್ಧತಿ) ಕೋರ್ಸನ್ನು ನಡೆಸಲಾಗುತ್ತಿದ್ದು ಈ ಕೆಳಗಿನ ವಿಶ್ವವಿದ್ಯಾಲಯ/ಸಂಸ್ಥೆಗಳ ವಿದ್ಯಾರ್ಥಿಗಳು ಈ ಕೋರ್ಸಿಗೆ ಪ್ರವೇಶ ಪಡೆಯಬಯಸಿರುತ್ತಾರೆ.<br>1. ದೆಹಲಿ ವಿಶ್ವವಿದ್ಯಾಲಯ |

| | |
|---|---|
| | 2. ಬಾಬಾ ಸಾಹೇಬ ಅಂಬೇಡ್ಕರ ವಿಶ್ವವಿದ್ಯಾಲಯ, ದೆಹಲಿ<br>3. SVYASA ವಿಶ್ವವಿದ್ಯಾಲಯ, ಬೆಂಗಳೂರು<br>4. Apex Professional ವಿಶ್ವವಿದ್ಯಾಲಯ, ಬೆಂಗಳೂರು<br>5. MES ವಿದ್ಯಾಲಯ, ಬೆಂಗಳೂರು<br>6. ಕ್ರಿಸ್ತು ಜಯಂತಿ ವಿದ್ಯಾಲಯ, ಬೆಂಗಳೂರು<br>ಈ ವಿಶ್ವವಿದ್ಯಾಲಯಗಳೊಂದಿಗೆ ಹಾಗೂ ಮುಂದೆ ಈ ಬಗ್ಗೆ ಆಸಕ್ತಿ ತೋರುವ ವಿಶ್ವವಿದ್ಯಾಲಯ/ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **IKS ಕೋರ್ಸ್‌ಗಳನ್ನು ನಡೆಸಲು ವಿವಿಧ ವಿಶ್ವವಿದ್ಯಾಲಯ/ಸಂಸ್ಥೆಗಳ ಜೊತೆ ಒಡಂಬಡಿಕೆ (MOU) ಮಾಡಿಕೊಳ್ಳುವ ಬಗ್ಗೆ ಕಾನೂನು ಅಭಿಪ್ರಾಯ ಪಡೆದು, ವಿಶ್ವವಿದ್ಯಾಲಯಕ್ಕೆ ಯಾವುದೇ ರೀತಿಯ ತೊಡಕಾಗದಂತೆ ವಿವಿಧ ವಿಶ್ವವಿದ್ಯಾಲಯ/ಸಂಸ್ಥೆಗಳ ಜೊತೆ ಒಡಂಬಡಿಕೆ (MOU) ಮಾಡಿಕೊಳ್ಳಲು ಸಭೆಯು ಅನುಮೋದಿಸಿತು.** |
| **13** | **IKS (Indian Knowledge System) ಭಾರತೀಯ ಜ್ಞಾನ ಪದ್ಧತಿ ವಿಷಯದಲ್ಲಿ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ.**<br>ವಿವಿಧ ವಿಶ್ವವಿದ್ಯಾಲಯ/ಸಂಸ್ಥೆಗಳ ವಿದ್ಯಾರ್ಥಿಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ IKS (ಭಾರತೀಯ ಜ್ಞಾನ ಪದ್ಧತಿ) ಕೋರ್ಸಿಗೆ ಪ್ರವೇಶ ಪಡೆಯಬಯಸಿರುತ್ತಾರೆ. ಅಲ್ಲದೇ ಅನೇಕ ವಿಶ್ವವಿದ್ಯಾಲಯ/ಸಂಸ್ಥೆಗಳು ಈ ಬಗ್ಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜೊತೆ ಒಡಂಬಡಿಕೆ ಮಾಡುಕೊಳ್ಳಲು ಮುಂದೆ ಬಂದಿದ್ದು, ಕೆಲವು ಸಂಸ್ಥೆಗಳೊಂದಿಗೆ ಈ ಬಗ್ಗೆ ಸಂವಹನ ನಡೆಸಲಾಗುತ್ತಿದೆ. ಆದ್ದರಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಾಗೂ ಇತರೆ ವಿಶ್ವವಿದ್ಯಾಲಯ/ಸಂಸ್ಥೆಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ IKS- (ಭಾರತೀಯ ಜ್ಞಾನ ಪದ್ಧತಿ) (ಭಾರತೀಯ ಜ್ಞಾನ ಪದ್ಧತಿ) Short Term/Open Elective ಮೊದಲಾದ ಕೋರ್ಸಗಳನ್ನು ಆರಂಭಿಸಲು ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **IKS (Indian Knowledge System) ಭಾರತೀಯ ಜ್ಞಾನ ಪದ್ಧತಿ ವಿಷಯದಲ್ಲಿ Short Term/Open Elective ಮೊದಲಾದ ಕೋರ್ಸ್‌ಗಳನ್ನು ಪ್ರಾರಂಭಿಸಲು ಸಭೆಯು ಅನುಮೋದಿಸಿತು.** |
| **14** | **ಯೋಗ ಚಿಕಿತ್ಸೆ ಮತ್ತು ಸಮಾಲೋಚನೆ ವಿಭಾಗದ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಯೋಗ ಚಿಕಿತ್ಸೆ ಮತ್ತು ಸಮಾಲೋಚನೆ ವಿಭಾಗದ ಮುಖ್ಯಸ್ಥರಾದ ಡಾ.ಜಯರೇವಣ್ಣ ಇವರು ದಿನಾಂಕ: 07.11.2023 ರ ತಮ್ಮ ಮನವಿಯಲ್ಲಿ, ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 2023–24ನೇ ಸಾಲಿನ ಎಂ.ಎಸ್ಸಿ. ಯೋಗ ಚಿಕಿತ್ಸೆ ಮತ್ತು ಸಮಾಲೋಚನ ಕೋರ್ಸಿಗೆ ಬೇಡಿಕೆಯ ಅನುಸಾರ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವಂತೆ ಕೋರಿರುತ್ತಾರೆ. ಪ್ರಸ್ತುತ ಸರ್ಕಾರದ ನಿಯಮದಂತೆ ಎಲ್ಲಾ ವಿಭಾಗಗಳಲ್ಲಿ 40 ವಿದ್ಯಾರ್ಥಿಗಳ ಪ್ರವೇಶಾತಿಗೆ ಅವಕಾಶವಿರುತ್ತದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಎಂ.ಎಸ್ಸಿ. ಯೋಗ ಚಿಕಿತ್ಸೆ ಮತ್ತು ಸಮಾಲೋಚನೆ ಕೋರ್ಸಿಗೆ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ಸಭೆಯ ಚರ್ಚೆ |

| | |
|---|---|
| | ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಯೋಗ ಚಿಕಿತ್ಸೆ ಮತ್ತು ಸಮಾಲೋಚನೆ ವಿಭಾಗದ ಎಂ.ಎಸ್ಸಿ. ಕೋರ್ಸಿಗೆ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಯನ್ನು 40 ರಿಂದ 60ಕ್ಕೆ ಹೆಚ್ಚಿಸಲು ಸಭೆಯು ತೀರ್ಮಾನಿಸಿ ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿತು.** |
| **15** | **ಸಂಸ್ಕೃತ ಕಾಲೇಜುಗಳಲ್ಲಿ ಬಿ.ಎ ಮತ್ತು ಎಂ.ಎ ತರಗತಿಗಳಿಗೆ ವಿದ್ಯಾರ್ಥಿಗಳ ಕನಿಷ್ಠ ದಾಖಲಾತಿಯನ್ನು ನಿಗದಿಪಡಿಸುವ ಬಗ್ಗೆ.**<br>ಪ್ರಾಂಶುಪಾಲರು, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಇವರು ದಿ: 02.01.2023ರ ತಮ್ಮ ಪತ್ರದಲ್ಲಿ "ಮೈಸೂರಿನಲ್ಲಿ ಮಹಾರಾಜರಿಂದ ಸುಮಾರು 150ವರ್ಷಗಳ ಹಿಂದೆ ಪಾರಂಭಿಸಲ್ಪಟ್ಟ ಶ್ರೀಮನ್ಮಹಾರಾಜ ಕಾಲೇಜು ಮತ್ತು ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು ಈ ಎರಡೂ ಸರ್ಕಾರಿ ಕಾಲೇಜುಗಳು ಹಾಗೂ ಅದರಂತೆ ರಾಜ್ಯದ ಎಲ್ಲ ಸಂಸ್ಕೃತ ಕಾಲೇಜುಗಳು ಸಾಂಪ್ರದಾಯಿಕ ಪದ್ಧತಿಯಲ್ಲಿ ಶಿಕ್ಷಣವನ್ನು ನೀಡುತ್ತಿರುತ್ತವೆ.<br>ಸದರಿ ಸಂಸ್ಥೆಗಳಲ್ಲಿ ನೀಡಲಾಗುತ್ತಿರುವ ವೇದ, ವೇದಾಂತ ಮತ್ತು ಶಾಸ್ತ್ರಗಳ ಆಳವಾದ ಅಧ್ಯಯನವನ್ನು ಒಳಗೊಂಡ ಶಿಕ್ಷಣ ವ್ಯವಸ್ಥೆಯು ಬೇರೆ ಯಾವ ಕಾಲೇಜುಗಳಲ್ಲಾಗಲಿ ಅಥವಾ ವಿಶ್ವವಿದ್ಯಾಲಯಗಳಲ್ಲಾಗಲಿ ನಡೆಯುತ್ತಿಲ್ಲ. ಉದ್ಯೋಗ ಆಧಾರಿತ ಶಿಕ್ಷಣವಲ್ಲದ ಕಾರಣದಿಂದ ಕೇವಲ ಆಸಕ್ತರು ಮಾತ್ರ ಈ ಸಾಂಪ್ರದಾಯಿಕ ಶಿಕ್ಷಣವನ್ನು ಪಡೆಯುವಲ್ಲಿ ಉತ್ಸುಕರಾಗಿದ್ದು ಅಂದು ಕಾಲೇಜುಗಳನ್ನು ಪ್ರಾರಂಭಿಸಿದ ಮಹಾರಾಜರ ಉದ್ದೇಶವನ್ನು ಸಮರ್ಥವಾಗಿ ನೆರವೇರಿಸುವಲ್ಲಿ ಸದರಿ ಕಾಲೇಜುಗಳ ಯಶಸ್ವಿಯಾಗಿರುತ್ತವೆ. ಇನ್ನು ಮುಂದೆಯೂ ಕೂಡ ಹೀಗೇ ಉಳಿಸಿ ಬೆಳೆಸಿಕೊಂಡು ಹೋಗುವುದು ಉಚಿತವೆಂಬುದು ಎಲ್ಲ ಸಂಸ್ಕೃತಾಭಿಮಾನಿಗಳ ಆಶಯವಾಗಿರುತ್ತದೆ." ಆದ್ದರಿಂದ ಕನಿಷ್ಠ ದಾಖಲಾತಿ ನಿಗದಿಪಡಿಸುವ ಬಗ್ಗೆ ಕೋರಿದ್ದು ಈ ವಿಷಯವನ್ನು ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಸಂಸ್ಕೃತ ಮತ್ತು ಶಾಸ್ತ್ರಗಳ ಅಧ್ಯಯನ ಪರಂಪರೆಯನ್ನು ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಸಂಸ್ಕೃತ ಕಾಲೇಜುಗಳು ಉಳಿಸಿ, ಬೆಳೆಸಬೇಕು. ಈ ನಿಟ್ಟಿನಲ್ಲಿ ವ್ಯಾಪಕವಾಗಿ ಜಾಗೃತಿ ಮೂಡಿಸಿ ವಿದ್ಯಾರ್ಥಿಗಳನ್ನು ಸಂಸ್ಕೃತ ಶಿಕ್ಷಣದತ್ತ ಆಕರ್ಷಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸಭೆಯು ಸೂಚಿಸಿತು. ಸಂಸ್ಕೃತ ಕಾಲೇಜುಗಳಲ್ಲಿ ಬಿ.ಎ ಮತ್ತು ಎಂ.ಎ ತರಗತಿಗಳಿಗೆ ವಿದ್ಯಾರ್ಥಿಗಳ ಕನಿಷ್ಠ ದಾಖಲಾತಿ ಮಿತಿಯನ್ನು 01 ಕ್ಕೆ ನಿಗದಿಪಡಿಸಲು ಸಭೆಯಲ್ಲಿ ಹಾಜರಿದ್ದ ಪ್ರಾಚಾರ್ಯರು ಅನುಮೋದಿಸಿದರು. ಆದರೆ ಕಾಲೇಜು ಶಿಕ್ಷಣ ಇಲಾಖೆಯ ದಿ: 30.05.2013ರ ಸುತ್ತೋಲೆಯಂತೆ ಕನಿಷ್ಠ ದಾಖಲಾತಿ 05 ಆಗಿರುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.** |
| **16.** | **ಹಠಯೋಗ ಪ್ರದೀಪಿಕಾ ಗ್ರಂಥದ ಕುರಿತು ಅಲ್ಪಾವಧಿ ಕೋರ್ಸ್ (Short Term Course) ನಡೆಸುವ ಬಗ್ಗೆ.**<br>ಪ್ರೊ. ಶಿವಾನಿ ವಿ., ಶಾಸ್ತ್ರ ನಿಕಾಯಾಧ್ಯಕ್ಷರು ಇವರು "ಡಾ. ಜಯರಾಮನ್, ಸಾಂಖ್ಯ ಮತ್ತು ಯೋಗ ವಿಭಾಗ, (SVYASA) ವಿಶ್ವವಿದ್ಯಾಲಯ ಇವರು ಹಠಯೋಗ ಪ್ರದೀಪಿಕಾದಲ್ಲಿ ಅಲ್ಪಾವಧಿಯ ಕೋರ್ಸ್ ಅನ್ನು ಸ್ವಾಮಿ |

| | |
|---|---|
| | ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ (SVYASA) ವಿಶ್ವವಿದ್ಯಾಲಯದ ಜೊತೆಗೆ ಸಹಯೋಗದಲ್ಲಿ ನಡೆಸಲು ಇಚ್ಛಿಸಿದ್ದು, ಸದರಿ ಕೋರ್ಸಿಗೆ ಡಾ. ಜಯರಾಮನ್ ಮತ್ತು ತಂಡದವರು ಸಂಪನ್ಮೂಲ ವ್ಯಕ್ತಿಗಳಾಗಿರುತ್ತಾರೆ. ಮೇಲೆ ತಿಳಿಸಿದ ಕೋರ್ಸ್ ಡಿಸೆಂಬರ್ ತಿಂಗಳಿನಲ್ಲಿ ಕೋರ್ಸ್ ಪ್ರಾರಂಭವಾಗಲಿದೆ ಎಂದು ತಾತ್ಕಾಲಿಕವಾಗಿ ನಿಗದಿಪಡಿಸಲಾಗಿದೆ. ವಿಶ್ವವಿದ್ಯಾನಿಲಯದ ನಿಯಮಗಳ ಪ್ರಕಾರ ಸದರಿಯವರಿಗೆ ಸಂಭಾವನೆ ನೀಡಲಾಗುವುದು" ಎಂದು ತಮ್ಮ ಪತ್ರದಲ್ಲಿ ತಿಳಿಸಿದ್ದು ಈ ವಿಷಯವನ್ನು ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಉದ್ದೇಶಿತ ಹಠಯೋಗ ಪ್ರದೀಪಿಕಾ ಗ್ರಂಥದ ಕುರಿತು ಅಲ್ಪಾವಧಿ ಕೋರ್ಸ್ (Short Term Course) UGC ನಿಯಮಕ್ಕನುಗುಣವಾಗಿರುವುದನ್ನು ಖಚಿತಪಡಿಸಿಕೊಂಡು ನಿಯಮಾನುಸಾರ ಈ ಕೋರ್ಸನ್ನು ನಡೆಸಲು ಸಭೆಯು ಅನುಮೋದಿಸಿತು.** |
| **17.** | **Artificial Intelligence ಐಚ್ಛಿಕ ಕೋರ್ಸನ್ನು ನಡೆಸುವ ಬಗ್ಗೆ.**<br>ವಿಶ್ವವಿದ್ಯಾಲಯದ ಸ್ನಾತಕ ತರಗತಿಯ ತೃತೀಯ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕೋರ್ಸ್ ಐಚ್ಛಿಕವಾಗಿದ್ದು (Open Elective), ಅನೇಕ ವಿದ್ಯಾರ್ಥಿಗಳು ಇದರ ಕಲಿಕೆಗೆ ಆಸಕ್ತರಾಗಿದ್ದಾರೆ. ಆದ್ದರಿಂದ ಕರ್ನಾಟಕ ರಾಜ್ಯ ಉನ್ನತಶಿಕ್ಷಣ ಪರಿಷತ್ತಿನ ಮಾರ್ಗಸೂಚಿಯಂತೆ ಜೈನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಕೋರ್ಸಿನ ಸ್ವರೂಪ ಮತ್ತು ಪಠ್ಯಕ್ರಮವನ್ನು ಸಿದ್ಧಪಡಿಸಿದ್ದು, ವಿಶೇಷವಾಗಿ ಸಂಸ್ಕೃತ ವಿದ್ಯಾರ್ಥಿಗಳಿಗೆ ಈ ಕೋರ್ಸ್ ಅನ್ನು ರೂಪಿಸಲಾಗಿದೆ. ರಾಜ್ಯದ ಎಲ್ಲಾ ಸಂಸ್ಕೃತ ಕಾಲೇಜು ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಈ ಕೋರ್ಸ್ ಅನ್ನು ವಿಶ್ವವಿದ್ಯಾಲಯದಲ್ಲಿ ನಡೆಸುವ ಬಗ್ಗೆ ಸಭೆಯ ಚರ್ಚೆ ಮತ್ತು ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯದಲ್ಲಿ Artificial Intelligence ಐಚ್ಛಿಕ ಕೋರ್ಸನ್ನು ನಡೆಸಲು ಸಭೆಯು ಅನುಮೋದಿಸಿತು.** |
| **18.** | **ಕಾರ್ಯಾಗಾರ/ಸೆಮಿನಾರ್/ಸ್ಪರ್ಧೆ ಮೊದಲಾದ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುವ ಬಗ್ಗೆ.**<br>ಕೇಂದ್ರ ಸರ್ಕಾರದ ಭಾರತೀಯ ಭಾಷಾ ಸಮಿತಿಯು ಕಾರ್ಯಾಗಾರದ ಆಯೋಜನೆಗೆ ಅನುದಾನವನ್ನು ಒದಗಿಸಿದ್ದು, ಅದರಂತೆ ವಿಶ್ವವಿದ್ಯಾಲಯದಲ್ಲಿ "ಧ್ಯೇಯವಾಕ್ಯಾನಾಂ ವಿಶ್ಲೇಷಣಂ" ಎಂಬ ಕಾರ್ಯಾಗಾರವನ್ನು ಆಯೋಜಿಸಿದೆ. ಮುಂದೆ ರಾಜ್ಯದ 10 ಸ್ಥಳಗಳಲ್ಲಿ "ಸರಲಮಾನಕಸಂಸ್ಕೃತಂ" ಕಾರ್ಯಕ್ರಮವನ್ನು ಆಯೋಜಿಸಲಾಗುವುದು.<br>ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯವು ಪ್ರತಿ ವರ್ಷವೂ ರಾಷ್ಟ್ರಮಟ್ಟದಲ್ಲಿ ಸಂಸ್ಕೃತ ವಾಕಪ್ರತಿಯೋಗಿತಾವನ್ನು ಆಯೋಜಿಸುತ್ತಿದೆ. ಅದರ ಪೂರ್ವಭಾವಿಯಾಗಿ ರಾಜ್ಯಮಟ್ಟದಲ್ಲಿ ಸ್ಪರ್ಧೆಗಳನ್ನು ನಡೆಸಿ ಪ್ರತಿ ವಿಷಯದಲ್ಲಿ 1 ಸ್ಪರ್ಧಾಳುವನ್ನು ಆಯ್ಕೆ ಮಾಡಿ ಕಳುಹಿಸಬೇಕು. ಸಂಸ್ಕೃತ ಕಲಿಕೆಯ ಉತ್ತೇಜನಕ್ಕಾಗಿ ವಿಶ್ವವಿದ್ಯಾಲಯ ಸ್ಥಾಪನೆಗೂ ಮೊದಲು ಸರ್ಕಾರದಿಂದಲೂ ಸಹ ಅನೇಕ ವರ್ಷಗಳಿಂದ ವಾಕ್ಪ್ರತಿಯೋಗಿತಾವನ್ನು ಆಯೋಜಿಸಲಾಗುತ್ತಿದೆ. ಪ್ರಸ್ತುತ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯವು 2.5 ಲಕ್ಷ ರೂ. ಅನುದಾನ ನೀಡಿದ್ದು ಉಳಿದ ಮೊತ್ತವನ್ನು ವಿಶ್ವವಿದ್ಯಾಲಯದಿಂದ ಒದಗಿಸಿ ರಾಜ್ಯಸ್ತರೀಯ ಶಾಸ್ತ್ರೀಯ ವಾಕ್ಪ್ರತಿಯೋಗಿತಾ ಸ್ಪರ್ಧೆಗಳನ್ನು ಆಯೋಜಿಸುವ ಬಗ್ಗೆ ಸಭೆಯ ಚರ್ಚೆ ಮತ್ತು ಅನುಮೋದನೆಗೆ ಮಂಡಿಸಿದೆ. |

| | |
|---|---|
| | ಅಲಂಕಾರಶಾಸ್ತ್ರ ವಿಭಾಗದಿಂದ "ಡಾ. ಕೆ. ಕೃಷ್ಣಮೂರ್ತಿಯವರ ಕೊಡುಗೆಗಳ" ಬಗ್ಗೆ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗುವುದು. ಈ ಬಗ್ಗೆ ಸಭೆಯ ಚರ್ಚೆ ಮತ್ತು ಅನುಮೋದನೆಗೆ ಮಂಡಿಸಿದೆ. |
| **ನಿರ್ಣಯ** | **ವಿಶ್ವವಿದ್ಯಾಲಯದಲ್ಲಿ ಕಾರ್ಯಾಗಾರ/ಸೆಮಿನಾರ್/ಸ್ಪರ್ಧೆ ಮೊದಲಾದ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ಸಭೆಯು ಅನುಮೋದಿಸಿತು.** |
| **19.** | **ಪ್ರೊ. ಪದ್ಮಾಶೇಖರ್, ವಿಶ್ರಾಂತ ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರ ಹೆಸರಿನಲ್ಲಿ ಸ್ವರ್ಣಪದಕ ನೀಡುವ ಬಗ್ಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಪದ್ಮಾಶೇಖರ್ ಅವರು ದಿ: 01.01.2024ರ ತಮ್ಮ ಪತ್ರದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಜ್ಯೋತಿಷ್ಯಶಾಸ್ತ್ರದಲ್ಲಿ ಪಿಹೆಚ್.ಡಿ. ಪದವಿ ಪೂರೈಸುವ ಮಹಿಳಾ ವಿದ್ಯಾರ್ಥಿಗೆ ಸ್ವರ್ಣಪದಕ ನೀಡಲು 1.5 ಲಕ್ಷ ರೂ. ನೀಡಲು ಸಿದ್ಧವಿರುವುದಾಗಿ ತಿಳಿಸಿ, ಸ್ವರ್ಣ ಪದಕ ನೀಡಲು ಮಾನದಂಡವನ್ನು ನಮೂದಿಸಿ ವಿಶ್ವವಿದ್ಯಾಲಯದ ಪ್ರತಿಕ್ರೆಯೆಯನ್ನು ಕೋರಿರುತ್ತಾರೆ. ಈ ವಿಷಯದ ಬಗ್ಗೆ ಸಭೆಯ ಚರ್ಚೆ ಮತ್ತು ಅನುಮೋದನೆಗೆ ಮಂಡಿಸಿದೆ. |
| **ನಿರ್ಣಯ** | **ಪ್ರೊ. ಪದ್ಮಾಶೇಖರ್, ವಿಶ್ರಾಂತ ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರು ನಿಗದಿತ ಮೊತ್ತ ನೀಡಿದ ನಂತರ, ಯಾವ ಉದ್ದೇಶಕ್ಕೆ ಹಣ ಸಂದಾಯವಾಗಿದೆಯೋ ಅದೇ ಉದ್ದೇಶಕ್ಕೆ ಬಳಸುವ ಷರತ್ತಿಗೊಳಪಟ್ಟು, ಸದರಿ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿ ಇಟ್ಟು ಅದರ ಬಡ್ಡಿಯ ಹಣದಲ್ಲಿ ಪ್ರೊ. ಪದ್ಮಾಶೇಖರ್, ವಿಶ್ರಾಂತ ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರ ಹೆಸರಿನಲ್ಲಿ ಸ್ವರ್ಣಪದಕ ನೀಡಲು ಸಭೆಯು ಅನುಮೋದಿಸಿತು.** |

**ಕುಲಸಚಿವರು**
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು – 560018.

**ಕುಲಪತಿಗಳು**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
**ಬೆಂಗಳೂರು – 560018.**